ದಿನಾಂಕಃ01.02.2025 ರಂದು ಪಿ.ಡಬ್ಲ್ಯೂ-1 ರವರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಸಿಎಸ್ ವಕೀಲರಿಂದಃ</u>

ನನ್ನ ಪ್ರಮಾಣ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತಿರುತ್ತದೆ. ಈ ದಾವೆಯನ್ನು ಮುನಿರತ್ನಮ್ಮರವರ ವಿರುದ್ಧ ಹೂಡಿರುತ್ತೇನೆ. ಪ್ರತಿವಾದಿ ಪರಿಚಯ ಇದೆಯೇ ಎಂದರೆ ಇಲ್ಲ. ಪ್ರತಿವಾದಿ ಎಲ್ಲಿ ವಾಸ ಇರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯ ವಿಳಾಸ ಯಾರು ತಿಳಿಸಿರುತ್ತಾರೆ ಎಂದರೆ ಪ್ರತಿವಾದಿ ನನ್ನ ವಿರುದ್ಧ ದಾವೆ ಹೂಡಿರುತ್ತಾರೆ. ಏನು ಪರಿಹಾರ ಕೋರಿರುತ್ತೀರಾ ಎಂದರೆ ಪ್ರತಿವಾದಿ ನನ್ನ ವಿರುದ್ಧ ದಾವೆ ಹೂಡಿರುತ್ತಾರೆ, ಅದಕ್ಕಾಗಿ. ಯಾವ ಸ್ವತ್ತಿಗೆ ಸಂಬಂದಪಟ್ಟಂತೆ ದಾವೆ ಹೂಡಿರುತ್ತೀರಾ ಎಂದರೆ ಮನೆ. ದಾವಾ ಸ್ವತ್ತಿನ ಖಾತೆ ನಂಬರ್ ಏನು ಎಂದರೆ 122/1. ಅದರ ವಿಸ್ತೀರ್ಣ 28 ಇಂಟು 55. ದಾವಾ ಸ್ವತಿತನ ಚೆಕ್ಕು ಬಂದಿ ಏನು ಎಂದರೆ ಪೂರ್ವಕ್ಕೆ ದೇವರಾಜ್ ರವರ ಖಾಲಿ ಜಾಗ, ಪಶ್ಚಿಮಕ್ಕೆ ವೆಂಕಟರಾಮಯ್ಯ, ಉತ್ತರಕ್ಕೆ ರಸ್ತೆ, ದಕ್ಷಿಣಕ್ಕೆ ರಸ್ತೆ . ಉತ್ತರಕ್ಕೆ ರಸ್ತೆ ಮಾತ್ರ ಇರುತ್ತದೆಯೇ ಎಂದರೆ ಹೌದು. ದಾವೆ ಹೂಡುವಾಗ ಉತ್ತರಕ್ಕೆ ರಸ್ತೆ ಮಾತ್ರ ಇರುತ್ತದೆ ಎಂದು ವಕೀಲರಿಗೆ ತಿಳಿಸಿರುತ್ತೇನೆ.

2. ದಾವಾ ಸ್ವತ್ತು ಯಾರ ಹೆಸರಿನಲ್ಲಿದೆ ಎಂದರೆ ನನ್ನ ಹೆಸರಿನಲ್ಲಿ. ದಾವಾ ಸ್ವತ್ತು ನನಗೆ ಹೇಗೆ ಬಂದಿರುತ್ತದೆ ಎಂದರೆ ನನ್ನ ತಂದೆಯ ಮುಖಾಂತರ. ನನ್ನ ತಂದೆಯ ಹೆಸರಿನಲ್ಲಿ ದಾಖಲಾತಿ ಇದೆಯೇ ಎಂದರೆ ಇರುತ್ತದೆ. ನನ್ನ ತಂದೆಯ ಹೆಸರಿನಲ್ಲಿರುವ ದಾಖಲಾತಿಯನ್ನು ಹಾಜರುಪಡಿಸಿರುತ್ತೇನೆಯೇ ಎಂದರೆ ಹೌದು. ಯಾವ ವರ್ಷದಲ್ಲಿ ನನಗೆ ಖಾತೆಯಾಗಿರುತ್ತದೆ ಎಂದರೆ 15 ವರ್ಷಗಳ ಪೂರ್ವದಲ್ಲಿ. ನನ್ನ ತಂದೆಯ ಹೆಸರಿನಲ್ಲಿರುವ ದಾಖಲಾತಿ ಇದೆಯೇ ಎಂದರೆ ಇಲ್ಲ. ದಾವಾ ಸ್ವತ್ತು ನನ್ನ ಪಿತ್ರಾರ್ಜಿತ

ಸ್ವತ್ತಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೂ ನನಗೂ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 1 ರಿಂದ 5 ಅನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ.

3. ವಾದಿ ನನ್ನ ಮತ್ತು ಇತರರ ವಿರುದ್ದ ಒಎಸ್ ನಂಬರ್ 66/2022 ರಲ್ಲಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ತಕರಾರು ಸಲ್ಲಿಸಿರುತ್ತೇನೆ ಎಂದರೆ ಸರಿ. ಪ್ರತಿವಾದಿ ದಾವೆ ಹೂಡಿದ ನಂತರ ಈ ದಾವೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

4. ಸರ್ವೆ ನಂಬರ್ 125/1 ರ ಬಗ್ಗೆ ಮಾಹಿತಿ ಇದೆಯೇ ಎಂದರೆ ಇಲ್ಲ. ನಮ್ಮ ಗ್ರಾಮದ ಕೋಟೆ ನಾಗಮ್ಮರವರ ಪರಿಚಯ ಇದೆಯೇ ಎಂದರೆ ಇಲ್ಲ. ಅವರ ಮೊಮ್ಮಗ ಕೆ ಆರ್ ನಾರಾಯಣಪ್ಪ ಗೊತ್ತಾ ಎಂದರೆ ಗೊತ್ತಿಲ್ಲ, ಪ್ರತಿವಾದಿಯ ಗಂಡ ಕೆ ಆರ್ ಶ್ರೀನಿವಾಸ್ ರವರ ಪರಿಚಯ ಇದೆಯೇ ಎಂದರೆ ಗೊತ್ತಿಲ್ಲ, ಸರ್ವೆ ನಂಬರ್ 125/1 ಪ್ರತಿವಾದಿ ಗಂಡನ ಮನೆಯ ಪಿತ್ರಾರ್ಜಿತ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ಸಂಬಂದಪಟ್ಟ ಖಾತೆ ನಾಗಮ್ಮರವರ ಹೆಸರಿನಲ್ಲಿತ್ತು ಎಂದರೆ ಗೊತ್ತಿಲ್ಲ.ನಾಗಮ್ಮ ರವರು ಮರಣ ಹೊಂದಿದ ನಂತರ ಅವರ ಮೊಮ್ಮಕ್ಕಳು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ. ಸರ್ವೆ ನಂಬರ್ 125/1ರ 10ವರೆ ಗುಂಟೆಯ ಖಾತೆ ಪ್ರತಿವಾದಿಯ ಗಂಡನ ಹೆಸರಿನಲ್ಲಿದೆ ಎಂದರೆ ನನಗೆ ಗೊತ್ತಿಲ್ಲ . ಸದರಿ ಸ್ವತ್ತಿನ ಪೂರ್ವಕ್ಕೆ ಕೆ ಆರ್. ನಾರಾಯಣಪ್ಪರವರ ಸ್ವತ್ತು ಎಂದರೆ ಗೊತ್ತಿಲ್ಲ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಮಂಗಮ್ಮ ರವರ ಸ್ವತ್ತು, ದಕ್ಷಿಣಕ್ಕೆ ರಸ್ತೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ಸೇರಿಸಿಕೊಂಡು ಈ ದಾವೆ ಹೂಡಿರುತ್ತೇವೆ ಎಂದರೆ ಸರಿಯಲ್ಲ.

5. ನಾನು ಮತ್ತು ಇತರರು ಗುಂಪು ಕಟ್ಟಿಕೊಂಡು ಪ್ರತಿವಾದಿಯ ಸ್ವತ್ತಿಗೆ ಅತಿಕ್ರಮ ಪ್ರವೇಶ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಿಃ 1.02.2022 ರಂದು ಅತಿಕ್ರಮ ಪ್ರವೇಶ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆದ ಕಾರಣ ಪ್ರತಿವಾದಿ ನಮ್ಮ ವಿರುದ್ಧ ಹಕ್ಕು ಘೋಷಣೆ ಮತ್ತು ಸ್ವಾಧೀನ ವಿರುದ್ಧ ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ದಾವೆಯಲ್ಲಿ ತಕರಾರು ಸಲ್ಲಿಸಿದ 6 ತಿಂಗಳ ನಂತರ ಈ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗೆ ಆಸ್ತಿಯನ್ನು ಬಿಟ್ಟುಕೊಡಬೇಕಾಗುತ್ತದೆ ಎಂದು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಪ್ರಮಾ ಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಿರುತ್ತೇನೆ.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಹಿ/-
(ಶ್ರೀಮತಿ ಸ್ನೇಹಾ ಎಂ.)
C/C ಪ್ರಧಾನ ಸಿಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು